ಅರಿತಿದ್ದಾಳೆ. ಅವಳನ್ನು ತಡೆಯುವ ಶಕ್ತಿ ನಿಮ್ಮಲ್ಲಿಲ್ಲ. ನೀವಿನ್ನು ಹೋಗಬಹುದು' ಎಂದು ಹೇಳಿದರು.

ಅವರು ಮಣಿಮೇಕಲೆ ಕಾಂಚೀಪುರಕ್ಕೆ ಬರದಂತೆ ಮಾಡಲು ನಡೆಸಿದ ಪ್ರಯತ್ನಗಳೆಲ್ಲಾ ವ್ಯರ್ಥವಾಯಿತು. ಆದರೂ ಬಂದವರ ಮುಖದ ಮೇಲಿದ್ದ ಕಠೋರತೆ ಮಾಯವಾಗಿರಲಿಲ್ಲ. ಶಾತ್ತನಾರ್ ಇಷ್ಟೆಲ್ಲಾ ಹೇಳಿದರೂ ಅವರು ಕರಗಲಿಲ್ಲ. ಶಾತ್ತನಾರ್ ಮೇಲೆ ಸಿಟ್ಟೆದುಕೊಂಡು, ಹೇಗೆ ಬಂದಿದ್ದರೋ ಹಾಗೆಯೇ ಶಬ್ದ ಮಾಡುತ್ತಾ ಕೊಠಡಿಯಾಚೆಗೆ ಬಿರುಗಾಳಿಯಂತೆ ಹೊರಟರು. ಮತ್ತೆ ಅದೇ ಗದ್ದಲ, ಕೂಗಾಟಗಳು ತಾರಕಕ್ಕೇರಿದವು. ಇದರಿಂದಾಗಿ ಶಾತ್ತನಾರ್ ಅವರಿಗೆ ಯಾರೋ ತಮ್ಮ ಎದೆಯ ಮೇಲೆಯೇ ನಡೆದಂತಾಯಿತು. ಬೆವರು ಧಾರಾಕಾರವಾಗಿ ಅವರ ಮುಖದಿಂದ ಇಳಿಯುತ್ತಿತ್ತು. ಧೈರ್ಯ ಮಾಡಿ ಕಣ್ಣುತೆರೆದು ಎದ್ದು ಕುಳಿತರು. ಕೊಠಡಿಯಲ್ಲಿ ಯಾರೂ ಇರಲಿಲ್ಲ! ನೀರವತೆ ಕೊಠಡಿಯನ್ನು ಆವರಿಸಿತ್ತು. ಎಲ್ಲವೂ ಕನಸಿನಂತೆ! ಹೊರಗಡೆ ಅದೇ ಮೌನ, ಎಲ್ಲವನ್ನೂ ಆಳುತ್ತಿತ್ತು. ಯಾವ ಶಬ್ದವೂ ಅವರ ಕಿವಿಗೆ ಕೇಳಲಿಲ್ಲ.



'ಹಾಗಾದರೆ ಇದುವರೆಗೆ ನಡೆದದ್ದೆಲ್ಲಾ ಏನು?' ಎಲ್ಲವೂ ಕನಸಿನಂತೆ ಅಳಿಸಿ ಹೋಯಿತು. ಶಾತ್ತನಾರ್ ಮೌನವಾಗಿ ಕಣ್ಣುಮುಚ್ಚಿ ಧ್ಯಾನಸ್ಥರಾದರು.

ಮುಸುಕಿದ್ದ ಮೋಡಗಳು ನಿಧಾನವಾಗಿ ಅರುಗಾಗಿದ್ದರಿಂದ ಆಗಸದಲ್ಲಿ ಚಂದಿರನ ಹೊಳಪು ಪ್ರಜ್ವಲಿಸುತ್ತಿತ್ತು. ಹೊರಗೆ ವೈಗೈ ನದಿಯಲ್ಲಿ ಹರಿಯುವ ನೀರಿನಂತೆಯೇ ಚಂದ್ರಬಿಂಬ ಬಳುಕುತ್ತಿತ್ತು.

* * *

'ಅಮ್ಮಾ...'

'ಯಾರು?' ಮಣಿಮೇಕಲೆಯೊಂದಿಗೆ ಸಂಜೆಯ ಪೂಜೆಗಾಗಿ ಹೂ ಕಟ್ಟುತ್ತಾ ಕುಳಿತಿದ್ದ ಮಾಧವಿ ತಲೆಯೆತ್ತಿ ಕೇಳಿದಳು.

'ನಿಮ್ಮ ತಾಯಿ ಚಿತ್ರಾವತಿಯವರು ನನ್ನನ್ನು ಕಳುಹಿಸಿದ್ದಾರೆ'

ನಿಂತಿದ್ದ ಚಿತ್ರಮಾಲೆಯನ್ನು ಕತ್ತೆತ್ತಿ ನೋಡಿದ ಮಾಧವಿ, 'ಏನು ಹೇಳಿಹೋಗು' ಎಂದು ಮೊಟಕಾಗಿ ಹೇಳಿ ಮತ್ತೆ ಹೂಕಟ್ಟುವುದರಲ್ಲಿ ತಲ್ಲೀನಳಾದಳು. ಮಣಿಮೇಕಲೆ ತನ್ಮಯತೆಯಿಂದ ಹೂ ಕಟ್ಟುವುದರಲ್ಲೇ ಮಗ್ನಳಾಗಿದ್ದಳು.

'ಅಮ್ಮಾ, ನಾಳೆ ಇಂದ್ರೋತ್ಸವ ನಡೆಯುತ್ತಿದೆ. ಈ ಸಲದ ಉತ್ಸವದಲ್ಲಿ ತಾಯಿ ಮಗಳ ನೃತ್ಯ ನೋಡಲು ನೆರೆ ರಾಜ್ಯದ ರಾಜಕುಮಾರರೆಲ್ಲಾ ಬರುತ್ತಿದ್ದಾರೆ. ಅತಿಥಿಗಳನ್ನು ಸ್ವಾಗತಿಸಲು ನಗರವನ್ನು ಮತ್ತು ನೃತ್ಯ ನಡೆಯುವ ವೇದಿಕೆಯನ್ನು ಶೃಂಗರಿಸುವ ಜವಾಬ್ದಾರಿಯನ್ನು ಸ್ವತಃ ಮಹಾರಾಜ ಮಾವನ್ ಕಿಲ್ಲೆ ಅವರೇ ವಹಿಸಿಕೊಂಡಿದ್ದಾರೆ. ನೀವು ನಾಳಿನ ಉತ್ಸವದಲ್ಲಿ ಪಾಲ್ಗೊಂಡರೆ, ರಾಜಕುವರರ ಕೃಪಾಕಟಾಕ್ಷಕ್ಕೆ ಒಳಗಾಗಿ ನಮ್ಮ ಬದುಕು ಸಾರ್ಥಕವಾಗುತ್ತದೆ ಎಂದು ಚಿತ್ರಾವತಿ ಅವರು ಹೇಳಿಕಳುಹಿಸಿದ್ದಾರೆ. ಅದಕ್ಕಾಗಿ ನೀವು ನಾಳೆಯ ನೃತ್ಯಕ್ಕೆ ತಯಾರಾಗಬೇಕಂತೆ!'.

'ನೀವು ಇಂದ್ರೋತ್ಸವದಲ್ಲಿ ಭಾಗವಹಿಸುವುದಿಲ್ಲ ಎಂಬುದನ್ನು ಕೇಳಿಯೇ ನಗರದ ಶ್ರೀಮಂತರು ಮತ್ತು ಜನಸಾಮಾನ್ಯರು ಕಳೆಗುಂದಿದ್ದಾರೆ. ಇದರಿಂದಾಗಿ ಉತ್ಸವದ ಸಡಗರವೇ ಕಡಿಮೆಯಾಗಿದೆ. ಇಂತಹ ವಯಸ್ಸು ಇರುವಾಗಲೇ ನಿಮ್ಮಲ್ಲಿರುವ ಮೇರು ಕಲೆಯಿಂದ ಅಷ್ಟೋ, ಇಷ್ಟೋ ಸಂಪಾದನೆ ಮಾಡಿಕೊಳ್ಳುವುದನ್ನು ಬಿಟ್ಟು, ಹೀಗೆ ಸನ್ಯಾಸಿನಿಯರಾಗಿ ಈ ಬಿಕ್ಕುಗಳ ಜೊತೆ ಇರುವುದು ನ್ಯಾಯವೇ?.... ಇದರಿಂದ ನಮ್ಮ ಕುಲದ ವೃತ್ತಿಗೇ ಕುಂದುಂಟಾಗುತ್ತದೆ! ....ಹೋಗಲಿ ನೀವು ಬರದಿದ್ದರೆ, ನಿಮ್ಮ ಮಗಳು ಮಣಿಮೇಕಲೆ ಅವಳನ್ನಾದರೂ ನೃತ್ಯಕ್ಕೆ ಕಳುಹಿಸಬೇಕಂತೆ! ಹೀಗೆಂದು ನಿಮ್ಮ ತಾಯಿ ಹೇಳಿಕಳುಹಿಸಿದ್ದಾರೆ'.

'ಚಿತ್ರಮಾಲೆ, ನೀನು ಹೇಳುವುದೆಲ್ಲಾ ಸುಕ್ಕುಗಟ್ಟುವ ಹೆಣ್ಣಿನ ದೇಹವನ್ನು ಕುರಿತು. ಎಂದಾದರೊಂದು ದಿನ ಕರಗುವ ಸಂಪತ್ತಿನ ಬಗೆಗೆ. ಅದರ ಹೊರತು ಇನ್ನಾವ ಆಲೋಚನೆಯೂ ನಿಮ್ಮಿಂದ ಬರುವುದಿಲ್ಲ! ಕೋವಲನು ಇಲ್ಲವಾದ ದಿನದಿಂದಲೇ ನಾನು ಮತ್ತು